ದಿ: 17.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲು: ಅರ್ಜಿದಾರರ ಪರ ಶ್ರೀ ಡಿ. ಎಸ್. ವಕೀಲರಿಂದ:-</u>**

1. ತೊಗಟ ಹೊಸಹಳ್ಳಿ ಗ್ರಾಮ ನನಗೆ ತಿಳಿದಿರುತ್ತದೆ. ಅಲ್ಲಿ ಸುಮಾರು 200 ಮನೆಗಳಿರುತ್ತವೆ. ಸದರಿ ಗ್ರಾಮದಲ್ಲಿ ನನ್ನ ಮಾವ ಎಲ್ಲಾರೆಡ್ಡಿರವರ ಮನೆ ಇರುತ್ತದೆ. ಆತ ಜಮೀನಿನಲ್ಲಿ ಮನೆ ನಿರ್ಮಿಸಿರುತ್ತಾರೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಎಮ್. ಸಿ. 34/2010 ಪ್ರಕರಣದಲ್ಲಿ ನನ್ನ ಹೆಂಡತಿಯ ವಿಳಾಸವನ್ನು ನಮೂದಿಸುವಾಗ ಮನೆ ಸಂಖ್ಯೆ, ರಸ್ತೆ ಹಾಗೂ ಬೀದಿಯನ್ನು ನಮೂದಿಸಿಲ್ಲ ಎಂದರೆ ಸರಿ. ಸದರಿ ಅರ್ಜಿ ಸಲ್ಲಿಸಿದ ನಂತರ ನಾನು ಸದರಿ ಪ್ರಕರಣದ ಸಂಗತಿಯನ್ನು ಆಕೆಗೆ ತಿಳಿಸಿಲ್ಲ ಎಂದರೆ ಸಾಕ್ಷಿ ಸದರಿ ಪ್ರಕರಣವನ್ನು ಹೂಡುವ ಪೂರ್ವದಲ್ಲಿ ನಮ್ಮ ನಡುವೆ ಹಲವು ಪಂಚಾಯತಿಗಳು ನಡೆದಿತ್ತು ಎಂದು ನುಡಿಯುತ್ತಾರೆ. ಸದರಿ ಪ್ರಕರಣವನ್ನು ದಾಖಲಿಸಿದ ಸಂಗತಿ ನ್ಯಾಯಾಲಯದ ಮೂಲಕ ಅಥವಾ ಇತರೆ ಮೂಲಗಳಿಂದ ಅರ್ಜಿದಾರರಿಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಅರ್ಜಿದಾರರಿಗೆ ನ್ಯಾಯಾಲಯದ ನೋಟಿಸ್ ಜಾರಿಯಾಗಿರುತ್ತದೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಪ್ರಕರಣದಲ್ಲಿ ಅಂಚೆ ಸಿಬ್ಬಂದಿಯೊಂದಿಗೆ ಶಾಮೀಲಾಗಿ ನಾನು ಸುಳ್ಳು ಷರಾ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ಸಂಬಂಧ ಅಂಚೆ ಸಿಬ್ಬಂದಿಯ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಮಾಡಿಸಿಲ್ಲ ಎಂದರೆ ಸರಿ. ಅರ್ಜಿದಾರರು ಉದ್ದೇಶಪೂರ್ವಕವಾಗಿ ನ್ಯಾಯಾಲಯದ ನೋಟಿಸ್ ಅನ್ನು ಸ್ವೀಕರಿಸಿರುವುದಿಲ್ಲ ಎಂದು ತೋರಿಸಲು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಅರ್ಜಿದಾರರ ಪೋಷಕರು ಸದಾ ಕಾಲ ಮನೆಯಲ್ಲಿಯೇ ಇರುತ್ತಿದ್ದರು ಎಂದರೆ ಸರಿ. ಅರ್ಜಿದಾರರೂ ಸಹ ಮನೆಯಲ್ಲಿಯೇ ಇರುತ್ತಿದ್ದರು ಎಂದರೆ ನನಗೆ ತಿಳಿದಿಲ್ಲ. ನಾನು ಮರುಮದುವೆಯಾಗಿರುತ್ತೇನೆ ಎಂದರೆ ಸರಿ. ಆಕೆಯಿಂದ ನನಗೆ ಇಬ್ಬರು ಮಕ್ಕಳು ಜನಿಸಿರುತ್ತಾರೆ. ಅವರುಗಳ ಜನ್ಮ ದಿನಾಂಕ 02/06/2010 ಹಾಗೂ 02/07/2014 ಆಗಿರುತ್ತದೆ.

**<u>ಅರ್ಜಿದಾರರ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಪಾಟೀ ಸವಾಲು ಮುಂದೂಡಲಾಯಿತು.</u>**

*(ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)*

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.**

**(ಟಿ. ಶ್ರೀಕಾಂತ್)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಆನೇಕಲ್.**